ನೀರು ಪ್ರಮಾಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಊರ ಹೊರ ವಲಯದಲ್ಲಿ ಸಮೃದ್ಧ ವಿರುವ ಒಂದು ಕೊಳವೆ ಬಾವಿ ಇದೆ. ಇದರಿಂದ ತಾತ್ಕಾಲಿಕವಾಗಿ ಬೀಳಿಗಿಗೆ ನೀರು ಪೂರೈಸಲು ಈ ಹಿಂದೆಯೇ ಅಧಿಕಾರಿಗಳು ಒಪ್ಪಿಕೊಂಡಿದ್ದರೂ ಆ ಕೆಲಸವಾಗಿಲ್ಲ. ಖಾಲಿ ಕೊಡಗಳನ್ನು ಹಿಡಿದುಕೊಂಡು ಜನರು ಬೀದಿಬೀದಿ ತಿರುಗುತ್ತಿದ್ದು ಈ ಸಮಸ್ಯೆಯ ಕುರಿತು ಯಾವ ಕ್ರಮ ಕೈಗೊಳ್ಳಲಾಗುವುದು ಎಂಬುದರ ಕುರಿತು ನಾನು ತಮ್ಮ ಮುಖಾಂತರ ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಸಂಬಂಧಪಟ್ಟ ಸಚಿವರ ಗಮನಕ್ಕೆ ಈ ವಿಷಯ ತಂದು ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

೯) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆಗೆ ಪೋಲೀಸ್ ಸ್ಟೇಷನ್ ಮಂಜೂರು ಮಾಡುವುದು.

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).— ಮಾನ್ಯ ಅಧ್ಯಕ್ಷರೇ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಬಹಳ ದೊಡ್ಡ ಹೋಬಳಿಯಾಗಿದ್ದು, ಚಿಕ್ಕನಾಯ್ಕನಹಳ್ಳಿ ಮತ್ತು ಹುಳಿಯಾರು ಪೋಲೀಸ್ ಠಾಣೆಗಳಿಂದ ೨೫ ಕಿ. ಮೀ. ಮತ್ತು ಹುಳಿಯಾರಿನಿಂದ ೨೦ ಕಿ. ಮೀ. ದೂರದಲ್ಲಿ ಇದ್ದು, ಗ್ರಾಮಾಂತರ ಒಳ ಪ್ರದೇಶವಾಗಿರುತ್ತದೆ. ಈ ಪ್ರದೇಶದ ಜನ ಯಾವುದೇ ಪೋಲೀಸ್ ಕಂಪ್ಲೇಂಟ್ ಕೊಡಲು ಮತ್ತು ಪೋಲೀಸ್ ಇಲಾಖೆಯಿಂ ನೆರವು ಪಡೆಯಲು ಬಹಳ ದೂರದ ಚಿಕ್ಕನಾಯ್ಕನಹಳ್ಳಿ ಮತ್ತು ಹುಳಿಯಾರಿಗೆ ಹೋಗಲು ಬಹಳ ಕಷ್ಟ ಆಗುತ್ತದೆ. ಆದ್ದರಿಂದ ಹಂದನಕೆರೆಗೆ ಒಂದು ಪೋಲೀಸ್ ಸ್ಟೇಷನ್ ಕೊಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿ ಇದ್ದು. ಇದುವರೆಗೆ ಮಂಜೂರು ಮಾಡಿರುವುದಿಲ್ಲ. ಆದ್ದರಿಂದ ೧೯೮೭-೮೮ನೇ ವರ್ಷದಲ್ಲಿ ತಪ್ಪದೆ ಈ ಪೋಲೀಸು ಠಾಣೆಯನ್ನು ಮಂಜೂರ್ಮಾಡಿ ಕೊಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಗೃಹ ಸಚಿವರ ಪರವಾಗಿ).— ಸನ್ಮಾನ್ಯ ಅಧ್ಯಕ್ಷರೇ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಹಂದನಕೆರೆ ಗ್ರಾಮಕ್ಕೆ ಹೊಸ ಪೋಲೀಸ್ ಠಾಣೆಗೆ ಈ ಕೆಳಕಂಡ ಸಿಬ್ಬಂದಿವರ್ಗದವರು ಬೇಕಾಗುತ್ತದೆ. ಪೋಲೀಸ್ ಸಬ್ ಇನ್‌ಸ್ಪೆಕ್ಟರು ಇಬ್ಬರು, ಸಹಾಯಕ ಸಬ್ ಇನ್‌ಸ್ಪೆಕ್ಟರು ಒಬ್ಬರು, ಹೆಡ್ ಕಾನ್‌ಸ್ಟೇಬಲ್‌ಗಳು ೮, ಪೋಲೀಸ್ ಕಾನ್‌ಸ್ಟೇಬಲ್‌ಗಳು ೪೦. ತಗಲುವ ವಾರ್ಷಿಕ ವೆಚ್ಚ ೭, ೩೮, ೨೬೪ ರೂಪಾಯಿಗಳು. ಪಂತರ್ತ ಅನಾವರ್ತಕ ವೆಚ್ಚ ೬೫,೫೦೦ರೂಪಾಯಿಗಳು. ಈ ಎಲ್ಲಾ ವೆಚ್ಚವನ್ನೂ ರಾಜ್ಯ ಸರ್ಕಾರವೇ ಭರಿಸಬೇಕಾಗಿರುವುದರಿಂದ, ಆರ್ಥಿಕ ಪರಿಸ್ಥಿತಿಯನ್ನು ಕೆಮನದಲ್ಲಿಟ್ಟುಕೊಂಡು, ಸೂಕ್ತ ಸಮಯದಲ್ಲಿ ಈ ಠಾಣೆಯ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

೧೦) ಗುಲ್ಬರ್ಗ ನಗರದಲ್ಲಿ ನೀರಿನ ತೊಂದರೆಯಾಗಿರುವುದು.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನಗರದಲ್ಲಿ ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಇಲ್ಲದೆ ತೀರಾ ತೊಂದರೆಯಾಗಿದೆ ದಿನಬಿಟ್ಟು ದಿನ ಒಂದು ಗಂಟೆ ಕಾಲ ಮಾತ್ರ ನೀರನ್ನು ಬಿಡಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಇದೂ ಕೂಡ ಇಲ್ಲ. ಹಾಕಿದ ಬೋರ್‌ವೆಲ್ಲುಗಳಲ್ಲಿ ನೀರಿಲ್ಲ. ಪರಿಸ್ಥಿತಿ ತೀರಾ ಭೀಕರವಾಗಿದೆ ಇದರ ಬಗ್ಗೆ ಅಲ್ಲಿನ ನಾಗರೀಕರೂ ಭಾರತ ಕಮ್ಯುನಿಸ್ಟ್ ಪಕ್ಷದ ಗುಲ್ಬರ್ಗಾ ಜಿಲ್ಲಾ ಮಂಡಲಿಯು, ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದಾರೆ. ಇದಾವುದಕ್ಕೂ ಸರ್ಕಾರದ ಪ್ರತಿಕ್ರಿಯೆ ಇಲ್ಲ. ಮಾತ್ರವಲ್ಲ, ಹುಣ್ಣಿನ ಮೇಲೆ ಬರೆ ಎಳೆಯುವಂತೆ, ನೀರಿನ ದರವನ್ನು ತಿಂಗಳಿಗೆ ೫ ರೂಪಾಯಿ ಇದ್ದಾದು, ರೂಪಾಯಿ ೨೫ಕ್ಕೆ ಹೆಚ್ಚಿಸಲಾಗಿದೆ. ಹೋಟೆಲಿನವರು ೬೫೦ ರೂಪಾಯಿಗಳನ್ನು ಕೊಡುತ್ತಿದ್ದರು. ಇದನ್ನು ರೂ. ೯೯೦ ರಿಂದ ರೂ. ೧೧೫೦ಕ್ಕೆ ಏರಿಸಿದ್ದಾರೆ. ನೀರೇ ಕೊಡದಿರಬೇಕಾದರೆ, ನೀರಿನ ದರವನ್ನಾದರೂ ಹೆಚ್ಚಿಸಲು ಕಾರಣವೇನು ?